ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು
**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಅಂತರಾಷ್ಟ್ರೀಯ

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ     ದಿನಾಂಕ : DATE : 23/10/2019

# ಕೆನಡಾ ಚುನಾವಣೆ: ತ್ರುದೌಗೆ ಪ್ರಯಾಸದ ಜಯ

**ಒಟ್ಟಾವಾ:** ಕೆನಡಾ ಸಂಸತ್‌ನಲ್ಲಿ ನಡೆದ ಚುನಾವಣೆ ಫಲಿತಾಂಶ ಪ್ರಕಟವಾಗಿದೆ. ಪ್ರಧಾನಿ ಜಸ್ಟಿನ್ ತ್ರುದೌ ನೇತೃತ್ವದ ಲಿಬರಲ್ ಪಾರ್ಟಿ 338 ಸ್ಥಾನಗಳ ಪೈಕಿ 157 ಸ್ಥಾನಗಳನ್ನು ಗೆದ್ದಿದೆ. ಚುನಾವಣೆಯಲ್ಲಿ ಜಯ ಗಳಿಸಲು ತ್ರುದೌ ಸಫಲರಾಗಿದ್ದರೂ, ಬಹುಮತ ಪಡೆದುಕೊಳ್ಳುವಲ್ಲಿ ವಿಫಲರಾಗಿದ್ದಾರೆ. ಪ್ರತಿಪಕ್ಷವಾಗಿರುವ ಕನ್ಸರ್ವೇಟಿವ್ ಪಕ್ಷ 121 ಸ್ಥಾನಗಳನ್ನು ಗಳಿಸಿದೆ. ಬ್ಲಾಕ್ ಕ್ಯುಬೆಕೋಯಿಸ್ 32, ಭಾರತೀಯ ಮೂಲದ ನ್ಯಾಯವಾದಿ-ರಾಜಕಾರಣಿ ಜಗ್ ಮೀತ್ ಸಿಂಗ್ ಅವರ ನ್ಯೂ ಡೆಮಾಕ್ರಾಟಿಕ್ ಪಕ್ಷ 24, ಗ್ರೀನ್ ಪಾರ್ಟಿ 3, ಸ್ವತಂತ್ರರು 1 ಸ್ಥಾನದಲ್ಲಿ ಜಯ ಗಳಿಸಿದ್ದಾರೆ.



**ಕಿಂಗ್ ಮೇಕರ್?:** ಭಾರತೀಯ ಮೂಲದ ಜಗ್‌ಮೀತ್ ಸಿಂಗ್‌ರ ನ್ಯೂ ಡೆಮಾಕ್ರಾಟಿಕ್ ಪಾರ್ಟಿ 24 ಸ್ಥಾನಗಳನ್ನು ಗಳಿಸಿದೆ. ಹೀಗಾಗಿ, ಅವರು ಸರ್ಕಾರ ರಚನೆಯಲ್ಲಿ ಪ್ರಧಾನ ಪಾತ್ರ ವಹಿಸುವ ನಿರೀಕ್ಷೆ ಇದೆ. ತ್ರುದೌ ಪಕ್ಷಕ್ಕೆ ಬಹುಮತಕ್ಕೆ ಇನ್ನು 13 ಸ್ಥಾನಗಳು ಬೇಕಾಗಿವೆ.

## ಸರ್ಕಾರ ರಚಿಸಲು ನೆತನ್ಯಾಹು ವಿಫಲ

**ಜೆರುಸಲೇಂ:** ಕಳೆದ ತಿಂಗಳು ಇಸ್ರೇಲ್ ಸಂಸತ್‌ನಲ್ಲಿ ಚುನಾವಣೆ ವೇಳೆ ಅತಂತ್ರ ಫಲಿತಾಂಶ ಉಂಟಾಗಿರುವುದರಿಂದ ಪ್ರಧಾನಿ ಬೆಂಜಮಿನ್ ನೆತನ್ಯಾಹು ಸರ್ಕಾರ ರಚಿಸಲು ಮತ್ತೆ ವಿಫಲರಾಗಿದ್ದಾರೆ. ಇದರಿಂದಾಗಿ ಅವರ ಪ್ರಬಲ ಪ್ರತಿಸ್ಪರ್ಧಿ ಬೆನ್ನಿ ಗಾಂಟ್ಸ್‌ಗೆ ಸರ್ಕಾರದ ನೇತೃತ್ವ ವಹಿಸಲು ಅವಕಾಶ ನೀಡಿದಂತಾಗಿದೆ. ಸರ್ಕಾರ ರಚಿಸಲು ಬೇಕಾಗಿದ್ದ 61 ಸ್ಥಾನಗಳನ್ನು ಪಡೆಯಲು ನೆತನ್ಯಾಹು ವಿಫಲರಾಗಿದ್ದಾರೆ.

11